**ಓಎಸ್ ಸಂಖ್ಯೆ: 16/2019 ಪಿಡಬ್ಲೂ:1**

**ದಿನಾಂಕ: 25-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: 8 ನೇ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ತಂದೆ ದಿನಾಂಕ 22-01-2013 ರಂದು ತೀರಿಕೊಂಡಿರುತ್ತಾರೆ ಎಂದರೆ ನಿಜ. ಶಿವಪ್ಪ ಅಂದಾಜು 1989 ರಲ್ಲಿ ತೀರಿಕೊಂಡಿರಬಹುದು. ನನ್ನ ಅಜ್ಜ ಮಲ್ಲಪ್ಪ 1998 ರಲ್ಲಿ ತೀರಿಕೊಂಡಿರುತ್ತಾನೆ. ಸದ್ರಿ ನನ್ನತಂದೆ ತೀರಿಕೊಂಡ ನಂತರ ಎಲ್ಲ ಆಸ್ತಿಗಳ ಮೇಲೆ ನಾವು ವಾರಸಾ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ತಪಶೀಲು ಆಸ್ತಿ 1 ಮತ್ತು 2 ನೇದ್ದಕ್ಕೆ ವಾರಸಾ ಆಗಿದೆ ಎಂದರೆ ಆಗಿದೆ ಅದನ್ನು ನನ್ನ ತಮ್ಮ ಮಾಡಿರುತ್ತಾನೆ ಎಂದು ಹೇಳುತ್ತಾರೆ. ಸದ್ರಿ ವಾರಸಾ ಪ್ರಕಾರ ಎಂಆರ್.ಎಚ್70/2014-15 ಹಕ್ಕು ದಾಖಲೆ ಮಂಜೂರಾಗಿದೆ ಎಂದರೆ ಆಗಿರಬಹುದು ಅದನ್ನು ನಾನು ನೋಡಿಲ್ಲ ಎಂದು ಹೇಳುತ್ತಾರೆ. ಸದ್ರಿ ಆ ಪ್ರಕಾರ ನನ್ನ ಹೆಸರು ಕೂಡ ಆ ದಾವಾ ಆಸ್ತಿಗಳಿಗೆ ದಾಖಲಾಗಿದೆ ಎಂದರೆ ಆಗಿರಬಹುದು ಎಂದು ಹೇಳುತ್ತಾರೆ. ನಿಪಿ-1, 3 ದಾಖಲೆಗಳನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ನಿಜ.

ನಾನು ಹಕ್ಕು ದಾಖಲೆ ಸಂಖ್ಯೆ ಎಂಆರ್.ಎಚ್70/2014-15 ಹಾಜರುಪಡಿಸಿಲ್ಲ ಎಂದರೆ ನಿಜ. ಸರ್ವೆ ನಂಬ್ರ 114 ಇದು 1987 ರ ಪೂರ್ವದಲ್ಲಿ ಶಿವಪ್ಪ ಮತ್ತು ಹನುಮಪ್ಪ ಇವರ

ಸಾಮೂಹಿಕ ಖಾತೆಯಲ್ಲಿತ್ತು ಎಂದರೆ ನಿಜ. 1989 ರಲ್ಲಿ ಪ್ರತ್ಯೇಕ ಖಾತೆಗಳು ಶಿವಪ್ಪ ಮತ್ತು ಹನುಮಪ್ಪನ ಹೆಸರಿನಲ್ಲಿ ಆದವು ಎಂದರೆ ನಿಜ. ಈ ಬಗ್ಗೆ ಮ್ಯುಟೇಷನ್ ಡೈರಿ ನಂಬ್ರ 5342 ಇದು ದಿನಾಂಕ 17-05-1989 ರಲ್ಲಿ ಮಂಜೂರಾಗಿದೆ ಎಂದರೆ ನಿಜ. ಆ ಸಮಯದಲ್ಲಿ ಶಿವಪ್ಪ ಹನುಮಪ್ಪ ಮತ್ತು ಅವರ ತಂದೆ ಮಲ್ಲಪ್ಪ ಕೂಡ ಜೀವಂತ ಇದ್ದರು ಎಂದರೆ ನಿಜ. ಏಳುಕೋಟೆಪ್ಪ 8 ನೇ ಪ್ರತಿವಾದಿ ನನ್ನ ಅತ್ತೆ ಹನುಮವ್ವನ ಗಂಡ.

ನನ್ನ ಅಜ್ಜ ನನ್ನ ತಂದೆ ಹನುಮಪ್ಪ ಶಿವಪ್ಪ ಹಾಗೂ ಪ್ರತಿವಾದಿ 8 ಒಬ್ಬರಿಗೊಬ್ಬರು ಚೆನ್ನಾಗಿದ್ದರು ಎಂದರೆ ಆ ವಿಷಯ ನನಗೆ ಗೊತ್ತಿಲ್ಲ. 1987 ರಲ್ಲಿ ನನ್ನ ಅಜ್ಜ ನನ್ನ ತಂದೆ ಹನುಮಪ್ಪ ಶಿವಪ್ಪ ಹಾಗೂ ಪ್ರತಿವಾದಿ 8 ಇವರ ಮಧ್ಯ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ ಅದು ನನ್ನ ತಾಯಿಗೆ ಗೊತ್ತು ಎಂದು ಹೇಳುತ್ತಾರೆ. ದಿನಾಂಕ 14-12-1987 ರಂದು 3 ನೇ ದಾವಾ ತಪಶೀಲು ಆಸ್ತಿ ಬಗ್ಗೆ ಖರೀದಿ ವ್ಯವಹಾರ ಆಗಿತ್ತು ಎಂದರೆ ಸರಿ ಅಲ್ಲ. 1987 ರಲ್ಲಿ ಶಿವಪ್ಪ ಮತ್ತು ಹನುಮಪ್ಪ ದಾವಾ ತಪಶೀಲು ಆಸ್ತಿ ನಂಬ್ರ 3 ನೇದ್ದಕ್ಕೆ ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದು ಪ್ರತ್ಯೇಕ ಉಪಭೋಗ ಮಾಡುತ್ತಿದ್ದರು ಎಂದರೆ ಎಲ್ಲ ಆಸ್ತಿಗಳು ಒಟ್ಟಿಗೆ ಇದ್ದವು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ತಂದೆ ಮತ್ತು ಶಿವಪ್ಪ ಪ್ರತ್ಯೇಕವಾಗಿ ಇದ್ದರು. ನಮ್ಮ ಅಜ್ಜ ನಮ್ಮೊಂದಿಗೆ ವಾಸ ಮಾಡುತ್ತಿದ್ದ. ಆ ಸಮಯದಲ್ಲಿ ನನ್ನ ಅಜ್ಜ ತಂದೆ ಮತ್ತು ದೊಡ್ಡಪ್ಪ ಇವರಿಗೆ ಯಾವ ರೀತಿಯ ಹಣಕಾಸಿನ ತೊಂದರೆ ಇತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ.

ನನ್ನ ತಂದೆ ಸರ್ವೆ ನಂಬ್ರ 114 ರಲ್ಲಿ ಪೂರ್ವ ದಿಕ್ಕಿನ 4 ಎಕರೆ 8 ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಿದ್ದ. ಅದೇ ಜಮೀನನ್ನು ನಾನು ದಾವಾ ತಪಶೀಲು ಆಸ್ತಿಯಲ್ಲಿ ಅನುಕ್ರಮ ನಂಬ್ರ 3 ಎಂದು ತೋರಿಸಲಾಗಿದೆ ಎಂದರೆ ನಿಜ. ಸದ್ರಿ ಆಸ್ತಿಗೆ ನನ್ನ ತಂದೆ ಶಿವಪ್ಪ ಮತ್ತು ಹನುಮಪ್ಪ ಸಂಚಗಾರ ಪತ್ರವನ್ನು ಪ್ರತಿವಾದಿ 8 ಇವರಿಗೆ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಸದ್ರಿ ಮಾತುಕತೆಯಲ್ಲಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಮಾತುಕತೆಯೇ ಆಗಿಲ್ಲ ಎಂದು ಹೇಳುತ್ತಾರೆ.

ದಿನಾಂಕ 31-05-1989 ನೇದ್ದರ ಖರೀದಿ ಪತ್ರವನ್ನು ನಾನು ನೋಡಿಲ್ಲ. ಅದರಲ್ಲಿ ಸಾಕ್ಷಿದಾರರು ಯಾರು ಯಾರು ಎಂದು ನಾನು ನೋಡಿಲ್ಲ. ಸದ್ರಿ ದಾಖಲೆಯಲ್ಲಿ ಏನು ಏನು ಖಂಡಿಕೆ ತೋರಿಸಿರುತ್ತಾರೆ ಯಾರು ಯಾರು ಮಾರಾಟ ಮಾಡಿರುತ್ತಾರೆ ಎಂದು ನಾನು

ನೋಡಿಲ್ಲ. 1987 ರಲ್ಲಿ ನಾನು 12 ವರ್ಷದವಳಾಗಿದ್ದೆ. ನನ್ನ ತಂದೆ ಮನೆಯ ಯಜಮಾನಿಕೆ ಮಾಡುತ್ತಿದ್ದ ಎಂದರೆ ನನ್ನ ತಂದೆ ತಾಯಿ ಇಬ್ಬರೂ ಮಾಡುತ್ತಿದ್ದರು ಎಂದು ಹೇಳುತ್ತಾರೆ. ದಿನಾಂಕ 31-05-1989 ರಂದು ಆದ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಅದು ಆಗಿಲ್ಲ ಆ ಕಾರಣಕ್ಕಾಗಿ ನಾನು ಹಾಜರುಪಡಿಸಿಲ್ಲ ಎಂದು ಹೇಳುತ್ತಾರೆ. ಸದ್ರಿ ಖರೀದಿ ಪತ್ರ ಸಮಯಕ್ಕೆ ನಾನು ಚಿಕ್ಕವಳಿದ್ದರಿಂದ ಏನು ಮಾತುಕತೆ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ನಿಜ ಆದರೆ ನನ್ನ ತಾಯಿಗೆ ಗೊತ್ತು ಎಂದು ಹೇಳುತ್ತಾರೆ. ದಿನಾಂಕ 31-05-1989 ರಂದು ನಾನು ನೋಂದಣಿ ಕಚೇರಿಯಲ್ಲಿ ಹಾಜರಿದ್ದಿರಲಿಲ್ಲ ಎಂದರೆ ಆ ರೀತಿಯ ದಾಖಲೆ ಆಗಿಲ್ಲ ಕಾರಣ ನಾನು ಹಾಜರಿದ್ದಿರಲಿಲ್ಲ ಎಂದು ಹೇಳುತ್ತಾರೆ. ದಿನಾಂಕ 31-05-1989 ರಂದು ದಾಖಲೆ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ನಾನು ಆ ದಾಖಲೆಯನ್ನು ಅವಶ್ಯಕತೆ ಇರದ ಕಾರಣ ನೋಡಿಲ್ಲ. ಸದ್ರಿ ಅದರಲ್ಲಿ ಆದ ಬರವಣಿಗೆ ಬಗ್ಗೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ನಮಗೆ ಹಣ ಕೊಟ್ಟಿಲ್ಲ ಮತ್ತು ನಾವು ಕಬ್ಜಾ ಕೊಟ್ಟಿಲ್ಲ ಎಂದು ನಮೂದಿಸಿರುತ್ತೇನೆ ಎಂದರೆ ನಿಜ. ಯಾವ ಆಧಾರದ ಮೇರೆಗೆ ಆ ರೀತಿಯಾಗಿ ನಾನು ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ತನ್ನ ತಂದೆ ತಾಯಿ ತನಗೆ ಸುಳ್ಳು ದಾಖಲೆ ಸೃಷ್ಠಿ ಮಾಡಿ ಖರೀದಿ ಪತ್ರ ಅಂತ ತಯಾರಿಸಿದ್ದು ಇರುತ್ತದೆ ಎಂದು ಹೇಳಿದ್ದರಿಂದ ಆ ರೀತಿಯಾಗಿ ನಮೂದಿರುತ್ತೇನೆ ಎಂದು ಹೇಳುತ್ತಾರೆ. ನನಗೆ ಅವರು ವ್ಯವಹಾರವೇ ಆಗಿಲ್ಲ ಎಂದು ಹೇಳಿದ್ದರು.

ಹನುಮತಂಪ್ಪ ಮಲ್ಲಪ್ಪ ಹಾವನೂರು ಇವರು ನನ್ನ ತಂದೆ ಎಂದರೆ ನಿಜ. ಶಿವಪ್ಪ ಮಲ್ಲಪ್ಪ ಹಾವನೂರು ಇವರು ನನ್ನ ದೊಡ್ಡಪ್ಪ. ನನ್ನ ತಂದೆ ಸಹಿ ಹಾಕುತ್ತಿದ್ದರು ನನ್ನ ದೊಡ್ಡಪ್ಪ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು. ನನ್ನ ಅಜ್ಜ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು. ಖರೀದಿ ಪತ್ರದಲ್ಲಿ ನನ್ನ ದೊಡ್ಡಪ್ಪ ಮತ್ತು ಅಜ್ಜ ಯಾವ ರೀತಿಯಾಗಿ ಸಹಿ ಹಾಕಿರುತ್ತಾರೆ ಎಂದು ನಾನು ನೋಡಿಲ್ಲ. ನನ್ನ ದೊಡ್ಡಪ್ಪ ಶಿವಪ್ಪ ಹಾವನೂರು ಎಂದು ಸಹಿ ಹಾಕುತ್ತಿದ್ದರು ಎಂದರೆ ಸರಿ ಅಲ್ಲ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು ಎಂದು ಹೇಳುತ್ತಾರೆ. ನಾರಾಯಣಪ್ಪ ಹಾದಿಮನಿ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಅವರು ನಮ್ಮ ಊರಿನವರು ಅಲ್ಲ. ಖರೀದಿ ಪತ್ರದ ಆಧಾರದ ಮೇಲೆ ಯಾವ ಯಾವ ದಾಖಲೆಗಳು ಆಗಿದ್ದ ಬಗ್ಗೆ ನಾನು ನೋಡಿಲ್ಲ. ಎಂಆರ್ 5356 ಮಂಜೂರಾಗಿದೆ

ಎಂದರೆ ಖೊಟ್ಟಿ ಮಂಜೂರು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸದ್ರಿ ಪಹಣಿ ಪತ್ರದಲ್ಲಿ 8 ನೇ ಪ್ರತಿವಾದಿ ಈತನ ಹೆಸರು ದಾಖಲಾಗಿದೆ ಎಂದರೆ ನಿಜ ಅದನ್ನು ಖೊಟ್ಟಿ ರೀತಿಯಿಂದ ದಾಖಲು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. 1989 ಸಮಯದಲ್ಲಿ ದಾವಾ ಆಸ್ತಿಗಳ ಮೇಲೆ ಯಾವ ಯಾವ ಬ್ಯಾಂಕಿನಲ್ಲಿ ಎಷ್ಟು ಸಾಲ ಇದ್ದವು ಎಂದು ನನಗೆ ಗೊತ್ತಿಲ್ಲ. ಸದ್ರಿ ಸಾಲವನ್ನು ಯಾವಾಗ ಯಾರು ತೀರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಾರಣ ನನ್ನ ತಂದೆ ಹಿರಿಯತನ ಮಾಡುತ್ತಿದ್ದರು. ಅವರಿಗೆ ಗೊತ್ತು ಎಂದು ಹೇಳುತ್ತಾರೆ. ಆ ಸಾಲವನ್ನು ಯಾವಾಗ ತೀರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದ್ರಿ ನಾನು ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಿ ವಕೀಲರಿಗೆ ದಾವೆ ತಯಾರಿಸಲು ಮಾಹಿತಿ ನೀಡಿರುತ್ತೇನೆ.

ಸದ್ರಿ ಎಂಆರ್ 5435 ಇದು ಸಾಲ ತೀರಿಸಿದ ಕುರಿತು ಡೈರಿ ಮಂಜೂರಾಗಿದ್ದು ಅದನ್ನು ನೋಡಿರುತ್ತೇವೆ ಖೊಟ್ಟಿ ಸೃಷ್ಠಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದ್ರಿ ದಾಖಲೆಯನ್ನು 8 ನೇ ಪ್ರತಿವಾದಿ ಸೃಷ್ಠಿಸಿರುತ್ತಾರೆ ಎಂದು ಹೇಳುತ್ತಾರೆ. ಯಾರು ಯಾರು ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂಬ ಸಲಹೆಗೆ ಪ್ರತಿವಾದಿ 8 ಇವರು ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಎಂಆರ್ 5356 ಮತ್ತು ಎಂಆರ್ 5435 ಡೈರಿಗಳನ್ನು ನಾವು ಪ್ರಶ್ನೆ ಮಾಡಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**